
ಆತ್ಮೀಯವಾದ ಸ್ನೇಹ ಎಂಬ ಪ್ರೀತಿ.

ಶ್ರೀರಾಮರು ಎಂ.ಎ. ಓದುತ್ತಿದ್ದಾಗ ತೇಜಸ್ವಿ ಮೂಡಿಗೆರೆಯ ಜನ್ನಾಪುರದ ಸಮೀಪ ಕಾಫಿತೋಟ ಮಾಡುತ್ತಿದ್ದರು, ಒಬ್ಬರೇ! ಆಗಾಗ್ಗೆ ಸ್ನೇಹಿತರು ಅಲ್ಲಿಗೆ ಭೇಟಿ ಕೊಡಬೇಕಿತ್ತು. ಹೀಗೊಮ್ಮೆ ಶ್ರೀರಾಮ ಮತ್ತು ತೇಜಸ್ವಿ ತೋಟದಲ್ಲಿ ಸೇರಿದ್ದಾಗ ಬೆಳ್ಳಂಬೆಳಗ್ಗೆ ತೇಜಸ್ವಿ ತಮ್ಮ ನಾಯಿ ಕಿವಿಯೊಡನೆ ತೋಟದಲ್ಲಿ ತಿರುಗಾಡಲು ಹೊರಟರು. ಕಾಫಿಗಿಡಗಳ ಕೆಳಗೆ ಇರುತ್ತಿದ್ದ ಕಾಡುಕೋಳಿಗಳನ್ನು ಚುರುಕಾದ ಕಿವಿ ಬೊಗಳಿ ಎಬ್ಬಿಸಿಬಿಡುತ್ತಿತ್ತು. ಅವನ್ನು ತೇಜಸ್ವಿ ಬಂದೂಕಿನಿಂದ ಹೊಡೆಯುತ್ತಿದ್ದರು. ಹೀಗೆ ಬೇಟೆಯಾಡಿದ ಕೆಲವು ಕೋಳಿಗಳನ್ನು ಹಿಡಿದುಕೊಂಡು ಬರುವಾಗ, ಗುಂಡುಬಿದ್ದ ಒಂದು ಹುಂಜ ಓಡಿಹೋಗಿ ತೋಟದ ಬೇಲಿಯಾಚೆಗಿನ ಹಳ್ಳಕ್ಕೆ ಬಿದ್ದಿತು. ಅದನ್ನು ತರಲು ಹಳ್ಳಕ್ಕೆ ಇಳಿಯಲು ಶ್ರೀರಾಮ್ ಉದ್ಯುಕ್ತರಾದಾಗ ಹಸಿಮಣ್ಣು ಜಾರಿ ಅಲ್ಲಿ ಬಿದ್ದಿದ್ದ ಮುಳ್ಳುತಂತಿ ಅವರ ಬೆನ್ನಿನ ಕೆಳಭಾಗವನ್ನು ಆಳವಾಗಿ ಕೊರೆಯಿತು. ಹುಂಜವನ್ನು ಹಿಡಿದು ಮನೆಗೆ ಬಂದ ತೇಜಸ್ವಿ ಗೆಳೆಯನನ್ನು ಮಕಾಡೆ ಮಲಗಿಸಿ ರಕ್ತವನ್ನು ಒರಸಿ, ಗಾಯವನ್ನು ಡೆಟಾಲ್‌ನಿಂದ ಒರೆಸಿ ನೋಡಿದರೆ ಆಳವಾಗಿ ಸೀಳಿದ ಗಾಯ! 'ಮಾಡ್ತೀನಿ ಇರಿ ನಿಮಗೆ!' ಎನ್ನುತ್ತ ತೇಜಸ್ವಿ ಅಂದು ಚಾಲ್ತಿಯಲ್ಲಿದ್ದ ಪೆಂಟಿಡ್ ಎಂಬ ಮಾತ್ರೆಗಳನ್ನು ಕುಟ್ಟಿ ಪುಡಿ ಮಾಡಿ ಗಾಯಕ್ಕೆ ತುಂಬಿ, ಬಟ್ಟೆ ಹೊಲಿಯುವ ದಾರದಲ್ಲಿ ಗಾಯವನ್ನು ಹೊಲೆದರು. ಇದು ತೇಜಸ್ವಿಯವರ ಶಸ್ತ್ರಚಿಕಿತ್ಸೆ, ಸ್ನೇಹಿತನಿಗೆ ಪ್ರೀತಿಯ ಶಿಕ್ಷೆ! ಕೊಂಚ ಕಾಲದ ನಂತರ



ತೇಜಸ್ವಿ ಬರೆದ ಸಂತೆಯಲ್ಲಿ ಏಡಿ ಮಾರುವ ಹುಡುಗಿಯ ಚಿತ್ರ.